## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ ಸಿ ಸಂಃ 563/2019**

| | | |
|---|---|---|
| ಸಾಕ್ಷಿಯ ಹೆಸರುಃ | ಡಾ. ಆರ್ . ಶ್ರೀನಿವಾಸ | ಫ್ರಾಸಾಃಃ 14 |
| ತಂದೆಯ ಹೆಸರುಃ | ರಾಮಯ್ಯ | ಚಾಸಾಃಃ 11 |
| ವಯಸ್ಸುಃ | 63 ವರ್ಷ | ಪ್ರಮಾಣೀಕರಿಸಿದ ದಿಃ 13/02/2024 |
| ಉದ್ಯೋಗಃ | ನಿವೃತ್ತ ಅಪರ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ನಿರ್ದೇಶನಾಲಯ ಬೆಂಗಳೂರು | |
| ವಾಸ ಸ್ಥಳಃ | ಮೈಸೂರು. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು 2015 ರಿಂದ 2019 ರವರೆಗೆ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯಾ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ16/05/2016 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ಸತೀಶ, 29 ವರ್ಷ ಎಂಬುವವರು ಹಲ್ಲೆಯ ಚರಿತ್ರೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೋಸ್ಕರ ನನ್ನ ಮುಂದೆ ಹಾಜರಾಗಿದ್ದರು. ಅವರನ್ನು ಕೃಷ್ಣ ಎಂಬುವವರು ಸತೀಶ ಮತ್ತು ರತ್ನಮ್ಮ ಎಂಬುವವರನ್ನು ಕರೆದುಕೊಂಡು ಬಂದಿದ್ದರು. ನಾನು ಕೃಷ್ಣ ರವರನ್ನು ಪರೀಕ್ಷಿಸಿದಾಗ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆಃ–

1. ಬಲ ಭುಜದ ಮೇಲೆ ಒಂದು ಊತದ ಗಾಯ ಕಂಡುಬಂದಿದ್ದು, ಅದರ ವಿಸ್ತೀರ್ಣ 6x5 ಸೆಮೀ. ಇದ್ದು ಕಂದು ಬಣ್ಣದಿಂದ ಕೂಡಿರುತ್ತದೆ.

2. ಕತ್ತಿನ ಮೇಲೆ ತರಚಿದ ಗಾಯಗಳು ಕಂಡುಬಂದಿರುತ್ತವೆ.

3. ನಾನು ಮೊದಲನೇ ಗಾಯಕ್ಕೆ ಸಂಬಂಧಿಸಿದಂತೆ ಎಕ್ಸ್ ರೇ ಮಾಡಿಸಲು ಸೂಚಿಸಿದೆನು. ಎಕ್ಸ್ ರೇ ವರದಿಗಳ ಪ್ರಕಾರ ಭುಜದ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ. ಮೊದಲನೇ ಗಾಯ ತೀವ್ರ ಸ್ವರೂಪದ ಗಾಯವಾಗಿರುತ್ತದೆ. 2 ನೇ ಗಾಯ ಸಾಧಾರಣ ಸ್ವರೂಪದ ಗಾಯವಾಗಿರುತ್ತದೆ. ಒಬ್ಬ ವ್ಯಕ್ತಿಗೆ ಬಲವಾಗಿ ಕೈಯಿಂದ ಹೊಡೆದಾಗ ಆಗುವಂತಹ ಗಾಯವಾಗಿರುತ್ತದೆ.

4. ರತ್ನಮ್ಮ ರವರನ್ನು ಪರೀಕ್ಷಿಸಿದಾಗ ಅವರಿಗೆ ಮೊಣಕೈ ಮತ್ತು ಹೊಟ್ಟೆಯ ಮೇಲ್ಭಾಗದಲ್ಲಿ ತರಚಿದ ಗಾಯಗಳಾಗಿರುತ್ತವೆ. ಅವು ಸಾಧಾರಣ ಸ್ವರೂಪದ ಗಾಯಗಳಾಗಿರುತ್ತವೆ. ನಾನು ಕೊಟ್ಟಂತಹ ಚಿಕಿತ್ಸೆಯನ್ನು ಪರಿಶೀಲಿಸಿ ಸತೀಶರವರಿಗೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು **ನಿ.ಪಿ.12** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.12(ಎ)** ಎಂದು ಗುರುತಿಸಲಾಯಿತು. ನಾನು ಕೊಟ್ಟಂತಹ ಚಿಕಿತ್ಸೆಯನ್ನು ಪರಿಶೀಲಿಸಿ ರತ್ನಮ್ಮ ನವರಿಗೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ **ನಿ.ಪಿ.10** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.10(ಬಿ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ ಆರ್ ವಿ . ವಕೀಲರಿಂದಃ**

5. ಸತೀಶ ರವರಿಗೆ ಆದ ಗಾಯ ವೇಗವಾಗಿ ಓಡಿ ಕಲ್ಲಿನ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ. ರತ್ನಮ್ಮ ನವರಿಗೆ ಆದ ಗಾಯಗಳು ನೆಲದ ಮೇಲೆ ಉರುಳಿದಾಗ ಆಗುವ ಸಾಧ್ಯತೆ ಇದೆ. ನನ್ನ ಪ್ರಮಾಣ ಪತ್ರದಲ್ಲಿ ಗಾಯದ ವಯೋಮಿತಿ ತಿಳಿಸಿಲ್ಲ. ನಾನು ಗಾಯಾಳುಗಳಿಗೆ ಚಿಕಿತ್ಸೆ ನೀಡಿಲ್ಲ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.**

**ಪಿರಿಯಾಪಟ್ಟಣ.**